ನೀರಾವರಿ ಪ್ರದೇಶವನ್ನು ಹೆಚ್ಚಿಸುವುದು

740(778) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ಪ್ರಸಕ್ತ ಬೀದರ್ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯಲ್ಲಿ ಅಚ್ಚುಕಟ್ಟು ಹೊಂದಿರುವ ಪ್ರದೇಶದ ವಿಸ್ತೀರ್ಣವೆಷ್ಟು ;

ಆ) ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿ ಇದ್ದ ಅಚ್ಚುಕಟ್ಟು ಹೊಂದಿದ ಪ್ರದೇಶಗಳ ವಿಸ್ತೀರ್ಣವೆಷ್ಟು ;

ಇ) ಜಿಲ್ಲೆಯಲ್ಲಿ ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದಾಗ ಪ್ರಸಕ್ತ ಸಾಲಿನಲ್ಲಿ ಇರುವ ಅಂಕಿ-ಅಂಶಗಳ ಪ್ರಕಾರ ಎಷ್ಟು ಎಕರೆ ಪ್ರದೇಶ ಹೆಚ್ಚಾಗಿದೆ ;

ಈ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆವಿಗೆ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಿದೆ (ಪ್ರತಿ ವರ್ಷ ವೆಚ್ಚ ಮಾಡಿರುವ ಹಣದ ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ಅಂಕಿ- ಅಂಶಗಳಲ್ಲಿ ಒದಗಿಸುವುದು) ;

ಉ) ಬೀದರ್ ಜಿಲ್ಲೆಯಲ್ಲಿ ನೀರಾವರಿ ಅಚ್ಚುಕಟ್ಟು ಪ್ರದೇಶವನ್ನು ಹೆಚ್ಚಿಸಲು ಸರ್ಕಾರ ರೂಪಿಸಿರುವ ಕ್ರಮಗಳೇನು ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು) :

ಅ) 24467 ಹೇಕ್ಟೇರ್ (01-04-2010ರ ಅಂಕಿ-ಅಂಶಗಳಂತೆ)

ಆ) ಅಚ್ಚುಕಟ್ಟು ಪ್ರದೇಶಗಳ ವಿವರ ಕೆಳಕಂಡಂತಿದೆ.

2007-08 - 23320 ಹೆ.

2008-09 - 23937 ಹೆ.

2009-10 - 24467 ಹೆ.

ಇ) 1147 ಹೇಕ್ಟರ್ ಅಂದರೆ 2834 ಎಕರೆಗಳಷ್ಟು ಪ್ರದೇಶ ಹೆಚ್ಚಾಗಿದೆ.

ಈ) ಒಟ್ಟು ರೂ. 1435.94 ಲಕ್ಷ ಹಣವನ್ನು ವೆಚ್ಚ ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಉ) 2010–11ನೇ ಸಾಲಿನಲ್ಲಿ 728 ಹೇಕ್ಟರ್ (1799 ಎಕರೆ) ಅಚ್ಚುಕಟ್ಟು ಪ್ರದೇಶವನ್ನು ಹೆಚ್ಚಿಸಲು ಯೋಜಿಸಲಾಗಿದ್ದು, ಇದುವರೆಗೆ 344 ಹೇಕ್ಟರ್ (850 ಎಕರೆ) ಅಚ್ಚುಕಟ್ಟು ಪ್ರದೇಶವನ್ನು ಸೃಜಿಸಲಾಗಿದೆ.

ಶ್ರೀ.ಈಶ್ವರ್ ಭೀಮಣ್ಣಾ ಖಂಡ್ರೆ, ವಿಧಾನಸಭಾ ಸದಸ್ಯರು ಮುಂದಿಸುವ ಪ್ರಶ್ನೆ ಸಂಖ್ಯೆ: 778ಕ್ಕೆ ಉತ್ತರಿಸಬೇಕಾದ.

ಕ್ರ. ಸಂ.	ವಿಧಾನ ಸಭಾ ಕ್ಷೇತ್ರ.	ಕಾಮಗಾರಿಗಳ ಸಂಖ್ಯೆ.	ವರ್ಷವಾರು ವೆಚ್ಚ.				ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ.
			2007–08	2008–09	2009–10	ಒಟ್ಟು	
1	2	3	4	5	6	7	8
1	ಔರಾದ.	10	280.82	162.98	199.58	643.38	6
2	ಬಸವಕಲ್ಯಾಣ	12	122.15	69.04	35.51	226.70	6
3	ಹುಮನಾಬಾದ.	10	19.54	4.09	115.67	139.30	2
4	ಬೀದರ (ನಗರ)	4	77.50	20.91	1.36	99.77	2
5	ಬೀದರ (ದಕ್ಷಿಣ)	5	2.99	7.61	109.40	120.00	3
6	ಭಾಲ್ಕಿ	15	130.54	4.97	71.28	206.79	5
	ಒಟ್ಟು ಬೀದರ ಜಿಲ್ಲೆ.	56	633.54	269.6	532.8	1435.94	24